# ಕಳಸಾ-ಬಂಡೂರಿ ಯೋಜನೆಗೆ ಆಯವ್ಯಯದಲ್ಲಿ ಅನುದಾನ ಮೀಸಲು

## ಬಾಕಿ ಉಳಿದಿರುವ ಯೋಜನೆ ಪೂರ್ಣ ಮಾಡಲು ಪ್ರಾಮಾಣಿಕ ಪ್ರಯತ್ನ: ಸಿಎಂ

# ಬಜೆಟ್‌ನಲ್ಲಿ ನೀರಾವರಿಗೆ ಮೊದಲ ಆದ್ಯತೆ

28/2/2020

**ವಿಶ್ವವಾಣಿ ಸುದ್ದಿಮನೆ** ಮೈಸೂರು

ಮುಂದಿನ ತಿಂಗಳು ಮಂಡಿಸಲಿರುವ ಆಯವ್ಯಯದಲ್ಲಿ ರಾಜ್ಯದಲ್ಲಿ ನನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಅನುದಾನ ಮೀಸಲಿಡಲಾಗುವುದು. ಹಳೆಯ ನೀರಾವರಿ ಯೋಜನೆ ಪೂರ್ಣಗೊಳಿಸಲು ಮೊದಲ ಆದ್ಯತೆ ನೀಡುತ್ತೇವೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಹಲವಾರು ವರ್ಷದಿಂದ ಪರಿಹಾರ ಕಾಣದೆ ಇದ್ದ ಕಳಸಾ-ಬಂಡೂರಿ ಜಲ ವಿವಾದ ಈಗ ಬಗೆಹರಿದಿದೆ. ಇದರಿಂದಾಗಿ ನನಗೆ ಸಾಕಷ್ಟು ಸಂತೋಷ, ಸಂತಸವಾಗಿದೆ. ಈ ಯೋಜನೆಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟು ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತೇವೆ. ಬಾಕಿ ಉಳಿದಿರುವ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.



ರಾಜ್ಯದ ರೈತರು ನೆಮ್ಮದಿಯಿಂದ ಇರಲು ನೀರಾವರಿಗೆ ಮೊದಲ ಆದ್ಯತೆ ಕೊಡುತ್ತೇನೆ. ಈಗಾಗಲೇ ಬಜೆಟ್ ಅಧಿವೇಶನ ನಡೆಯುತ್ತಿರುವುದರಿಂದ ಸಾಕಷ್ಟು ಚರ್ಚೆಗಳಾಗಿದೆ. ರಾಜ್ಯದ ಅಭಿವೃದ್ಧಿಗೆ ಏನೇನು ಮಾಡಬೇಕು ಎನ್ನುವುದನ್ನು ಗಮನಿಸಿ ವಿಶೇಷ ಆದ್ಯತೆ ನೀಡುತ್ತೇನೆ. ಮಾರ್ಚ್ 5ರಂದು ಬಜೆಟ್ ಮಂಡಿಸಲಿದ್ದು, ಮೂರರೊಳಗೆ ಎಲ್ಲದಕ್ಕೂ ಅಂತಿಮ ರೂಪ ಕೊಡಲಾಗುವುದು ಎಂದರು.

ನಮ್ಮ ಸರಕಾರ ಬಂದು ಏಳು ತಿಂಗಳು ಮುಗಿದಿದೆ. ಅಭಿವೃದ್ಧಿಯ ದಿಕ್ಕಿನಲ್ಲಿ ಕೆಲಸ ಮಾಡುತ್ತಿದ್ದೇವೆ. ಜನರು ನಿರೀಕ್ಷೆ ಮಾಡಿದಂತೆ ಕೆಲಸ ಮಾಡಲು ಇನ್ನೂ ಆರು ತಿಂಗಳು ಬೇಕಾಗಬಹುದು. ನಾಡಿನ ಜನರು ಮೆಚ್ಚುವ ರೀತಿ ಒಳ್ಳೆಯ ಕೆಲಸ ಮಾಡಲಾಗುವುದು. ರೈತರು ನೆರೆ ಸಂತ್ರಸ್ತರಿಗೆ ಏನೇನು ಆಗಬೇಕು ಅದನ್ನು ಶಕ್ತಿಮೀರಿ ಕೆಲಸ ಮಾಡಲಾಗುವುದು. ಅಲ್ಲಿ ಇಲ್ಲಿ ಸ್ವಲ್ಪ ಲೋಪ ಕಂಡು ಬಂದಿರುವುದನ್ನು ಸರಿಪಡಿಸಿ ರೈತರು ನೆಮ್ಮದಿಯಾಗಿ ಬದುಕಲು ಬೇಕಾದ ವ್ಯವಸ್ಥೆ ಒದಗಿಸಲಾಗುವುದು ಎಂದರು.

ಸಚಿವರಾದ ವಿ.ಸೋಮಣ್ಣ,ಬಿ.ಸಿ.ಪಾಟೀಲ್, ಮಾಜಿ ಸಚಿವ ಸಿ.ಎಚ್. ವಿಜಯಶಂಕರ್, ಜಿಲ್ಲಾಧ್ಯಕ್ಷರಾದ ಟಿ.ಎಸ್. ಶ್ರೀವತ್ಸ, ಎಸ್.ಎ.ಮಹೇಂದ್ರ ಮೊದಲಾದವರು ಇದ್ದರು.

## ಸಂಘಟನೆಗಳ ವಿರುದ್ಧ ಕ್ರಮ

ದೇಶವಿರೋಧಿ ಘೋಷಣೆ ಕೂಗುವ ವ್ಯಕ್ತಿಗಳಿಗೆ ಕುಮ್ಮಕ್ಕು ಕೊಡುವ ಸಂಘಟನೆಗಳ ವಿರುದ್ಧ ಕ್ರಮಕೈಗೊಳ್ಳದಿದ್ದಕ್ಕೆ ಇದಕ್ಕೆ ಕೊನೆ ಮಾಡಲು ಸಾಧ್ಯವಿಲ್ಲ. ಪಾಕಿಸ್ತಾನ್ ಜಿಂದಾಬಾದ್ ಎಂದು ಯುವತಿ ಅಮೂಲ್ಯಾ ಘೋಷಣೆ ಕೂಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಿಎಂ, ಅಮೂಲ್ಯಾ ತಂದೆಯೇ ಅವಳ ಕೈ ಕಾಲು ಮುರಿಯಿರಿ ಅಂದಿದ್ದಾರೆ, ನಾನು ಅವಳ ರಕ್ಷಣೆಗೆ ಹೋಗೋಲ್ಲ ಅಂತ ಸ್ಪಷ್ಟನೆ ನೀಡಿದ್ದಾರೆ. ಹೀಗಾಗಿ ಕಾನೂನು ಪ್ರಕಾರ ಶಿಕ್ಷೆಯಾಗಲಿದೆ. ಆಕೆಗೆ ನಕ್ಸಲ್ ಸಂಘಟನೆಯೊಂದಿಗೆ ಸಂಬಂಧ ಇತ್ತು ಅನ್ನುವುದು ಸಾಬೀತಾಗಿದೆ. ಇದಕ್ಕೆ ಯಾರು ಪ್ರೇರಣೆ ಕೊಟ್ಟರು ಅನ್ನೋದು ತನಿಖೆಯಾಗಬೇಕು ಎಂದರು.

## ನಿಮ್ಮ ಕಾಲದಲ್ಲಿ ಏನಾಯ್ತೆಂದು ತಿರುಗಿ ನೋಡಿಕೊಳ್ಳಿ

ನಾನು ಅಧಿಕಾರಕ್ಕೆ ಬಂದು ಏಳು ತಿಂಗಳಾಯಿತು. ನೀವು ಐದು ವರ್ಷ, ಕುಮಾರಸ್ವಾಮಿ ಹದಿನಾಲ್ಕು ತಿಂಗಳು ಆಡಳಿತ ಮಾಡಿದ್ರು. ನಿಮ್ಮ ಕಾಲದಲ್ಲಿ ಏನೇನು ಮಾಡಿದ್ದೀರಾ ಅಂತ ಒಮ್ಮೆ ಹಿಂದಕ್ಕೆ ತಿರುಗಿನೋಡಿಕೊಳ್ಳಲಿ. ನಿಮ್ಮ ಕಾಲದಲ್ಲಿ ಏನಾಯಿತು ಅಂತ ನೋಡಿದರೆ ನಮಗೆ ಬಗ್ಗೆ ತೆಗೆದುಕೊಂಡು ಹೊಡೆಯುತ್ತಾರಾ? ನಿಮಗೆ ಹೊಡೆಯುತ್ತಾರೋ ಗೊತ್ತಾಗುತ್ತದೆ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದರು. ಆರು ತಿಂಗಳು ತಾಳ್ಮೆಯಿಂದ ಇದ್ದು ಎಲ್ಲವನ್ನು ಕಾದು ನೋಡಬೇಕು. ಆರು ತಿಂಗಳು ಕಾದರೆ ನಿಮ್ಮ ನಿಜ ಬಣ್ಣವನ್ನು ಬಯಲು ಮಾಡುತ್ತೇವೆ. ಕೇಂದ್ರದಿಂದ ಅನುದಾನ ಖೋತಾ ಆಗುತ್ತಿರುವ ಬಗ್ಗೆ ಕೇಳಿದಕ್ಕೆ ನನ್ನ ಅಂದಾಜಿನ ಪ್ರಕಾರ ಸ್ವಲ್ಪ ಮಟ್ಟಿಗೆ ಕಡಿತವಾಗುತ್ತದೆ ಎನ್ನುವುದನ್ನು ಗಮನಿಸಿದ್ದೇನೆ ಎಂದರು.



ಕಾನೂನಿನ ದೃಷ್ಟಿಯಿಂದ ದೇಶವಿರೋಧಿ ಹೇಳಿಕೆ ಕೊಡುವುದು ತಪ್ಪು. ಭಾರತದ ವಿರುದ್ಧ ಘೋಷಣೆ ಕೂಗುವುದು ದೇಶದ್ರೋಹದ ಕೆಲಸ. ಕೆಲವರು ಯುವಕರನ್ನ ಪ್ರಚೋದನೆ ಮಾಡುತ್ತಿದ್ದಾರೆ. ಹೀಗೆ ಪ್ರಚೋದನೆ ಮಾಡೋದು ಸಹ ದೇಶದ್ರೋಹದ ಕೆಲಸವಾಗಿದೆ.

-ಬಿ.ಸಿ.ಪಾಟೀಲ್ ಸಚಿವ